ನಾಚಿಕೆಯಾಗುತ್ತದೆ. ಅಪ್ಪಮಗಳೇ ಎಲ್ಲ ನಿರ್ಧರಿಸುವುದಾಗಿತ್ತು. ಹೊತ್ತೊತ್ತಿಗೆ ಊಟೋಪಚಾರ, ಕೊಟ್ಟಿಗೆ ಚಾಕರಿ ಮತ್ತು ಆಗಾಗ ಕರೆದ ನಂತರ ಮನೆಯ ಒಸಗೆಗೆ ಹಾಲಿನ ಉಗ್ಗದೊಂದಿಗೆ ಹೋಗಿ ಉಂಡು ಬರುವುದನ್ನು ಬಿಟ್ಟರೆ ತನಗೆ ಬೇರೇನೂ ತಿಳಿಯದು. ಇತ್ತ ಮನೆಯತ್ತ ಸತ್ತೆನೆಂದು ಕರೆದರೂ ಕೇಳುವವರಿಲ್ಲ; ಪುಟ್ಟತ್ತೆ ಮಗನ ಸಾವಿನ ನಂತರ ಬಹಳ ಬೇಗನೆ ಮುದುಕಿಯಾಗುತ್ತಿದ್ದಾಳೆ. ಗೋಡೆಕಂಬದೊಳಗಿನ ವರಲೆಯಂತೆ ಚಿಂತೆ ಒಳ ಜೀವವನ್ನು ಲಡ್ಡಾಗಿಸುತ್ತಿದೆ.

ತಿರುಮಲ ತೀರಿಕೊಂಡಾಗ ಅಕ್ಷರಶಃ ಮಾಲತಿ ಶೂನ್ಯಳಾಗಿದ್ದಳು. ಕಟ್ಟುತ್ತಿದ್ದ ಮನೆ ಅರ್ಧಾವಸ್ಥೆಯಲ್ಲಿದೆ. ಮನೆ ಗುತ್ತಿಗೆದಾರನಿಗೆ ಕೊಡುಕೊಳ್ಳಬೇಕಾದ ಹಣಕಾಸಿನ ವ್ಯವಹಾರದ ಗಂಧಗಾಳಿಯೂ ಅವಳಿಗಿಲ್ಲ. ಬ್ಯಾಂಕ್, ಸೊಸೈಟಿಯ ವ್ಯವಹಾರ, ಆಳುಕಾಳುಗಳ ಲೆಕ್ಕಾಚಾರ, ಸಾಲಪಾಲ ಅಜಿಬಾತ ಗೊತ್ತಿಲ್ಲ; ಅಂತ್ಯ ಸಂಸ್ಕಾರಕ್ಕೆ ಬಂದವರು ನಾಲ್ಕು ದಿನ ಉಳಿದು ಉಂಡುತೇಗಿ, 'ನೀನು ಗಟ್ಟಿಗಿತ್ತಿ ಅಂಬೂದ್ರಲ್ಲಿ ಅನುಮಾನಿಲ್ಲೆ. ಆದರೂ ಒಂಟಿ ಹೆಂಗ್ಸು. ಏನಾದ್ರೂ ಮದತ್ ಬೇಕಾದ್ರೆ ಕೇಳು—ಮಧ್ಯೆ ರಾತ್ರಿ ನಿದ್ರೆಲ್ಲಾದ್ರೂ ಎದ್ದು ಬತ್ತೊ" ಆಶ್ವಾಸನೆ ನೀಡಿ ಹೋದವರು ಇತ್ತ ಮುಖವೇ ಹಾಕಲಿಲ್ಲ. ಆಗ ಸಹಾಯಕ್ಕೆ ಒದಗಿದವನು ಬಾಬಣ್ಣ. ಸಂಪದಳನ್ನು ಶಾಲೆಗೆ ಕಳಹಿಸುವುದು ಹೇಗೆ? ಬಾಬಣ್ಣ ತನ್ನಮನೆಯಲ್ಲಿದ್ದು ಹೋಗಿ ಬರಲಿ ಅವಳು ತನಗೆ ಮಗಳಿದ್ದಂತೆ ಎಂದ. ಸಂಪದ ಒಪ್ಪಲಿಲ್ಲ. ಧೈರ್ಯದಿಂದ ಉಪಾಯ ಹುಡುಕಿದವಳು ಅವಳೇ. "ಅಪ್ಪಂಗೆ ಆನು ಚಲೊ ಓದಿ ದೊಡ್ಡ ಆಫೀಸರ್ ಆಗೊ ಹೇಳಿತ್ತು" ಎಂದು ಅವನ ಕನಸನ್ನು ಛಲವಾಗಿ ಸ್ವೀಕರಿಸಿ ಆವೇಶದಲ್ಲೆ ಧೈರ್ಯ ತಂದುಕೊಂಡಳು. ಬಾಬಣ್ಣನ ಮಧ್ಯಸ್ಥಿಕೆಯಲ್ಲಿ ಚಿಟ್ಟೆಯ ಮೇಲೆ ನಿಲ್ಲಿಸಿಟ್ಟಿದ್ದ ತಿರುಮಲನ ಬೈಕನ್ನು ಮಾರಿ ಸ್ಕೂಟಿಯನ್ನು ತಂದಳು. ಮಾರುವ ಮುನ್ನ ಬೈಕ್ ಸವಾರಿಯನ್ನು ಮನೆಯ ಅಂಗಳದಲ್ಲೇ ಕಲಿತು ಒಂದು ಸಲ ಮಂಚಿಕೇರಿಗೆ ಹೋಗಿ ಬಂದಳು. ಏರು ತಗ್ಗಿನ ಕಚಡಾ ಮಣ್ಣು ರಸ್ತೆಯಲ್ಲಿ ಸ್ಕೂಟಿ ಮೇಲೆ ಮಾಲತಿಯನ್ನು ಡಬಲ್ ಮಾಡಿಕೊಂಡು ಪುಟ್ಟ ಮಾಂತ್ರಿಕ ಪಕ್ಷಿಯಂತೆ ಪೇಟೆಗೆ ಹೋಗುವುದನ್ನು ನೋಡಿ ಸ್ವತಃ ಬಾಬಣ್ಣನೇ ಬೆರಗಾಗಿದ್ದ. "ಅಡ್ಡಿಲ್ಲ, ಬಾಪ್ರೆ ಅಪ್ಪನ ಸಾಹಸ ಗುಣ ಮಗಳಲ್ಲಿ ಉಂಟು" ಎಂದುಕೊಂಡ.

ಗದ್ದೆ ಬಯಲತ್ತ ಆಡಿಕೊಳ್ಳಲು ಹೋಗಿದ್ದ ದೇವಕಿಯ ನಾಲ್ಕೂ ಮಕ್ಕಳು ಮನೆಯೊಳ ಹೊಕ್ಕುತ್ತಿದ್ದಂತೆ 'ಹಸಿವಾಯ್ತು' ಎಂದು ರಾಗ ತೆಗೆದರು. ದೇವಕಿ ತೀರಾ ತಡವಾಗಿ ಹೆತ್ತ ಮಕ್ಕಳು. ಮಾಲತಿ ಮೊದಲು ಹೊಟ್ಟೆಬಾಕ ಮಕ್ಕಳಿಗೆ ಉಣ ಬಡಿಸಿದಳು. ಈ ಬಕಾಸುರ ಮಕ್ಕಳು ಬಂದು ಎಂಟು ದಿನಗಳಾದವು; ಮನೆಯ ಪಣತದಲ್ಲಿದ್ದ ಅಕ್ಕಿ ತೀರಲು ಬಂದಿತ್ತು. ಜಗಲಿ, ಅಟ್ಟ, ಒಳ ಎಲ್ಲ ಕಡೆ ಅವರ ಆಟ, ಕಸ, ಒಮ್ಮೊಮ್ಮೆ ಹೊಡೆದಾಟ. ಚಿಟ್ಟೆಯುದ್ದಕ್ಕೆ ಉಚ್ಚೆಯ ನಾತ; ಮನೆಯ ಸುತ್ತು ಕಾಲು ಹಾಕಿದಲ್ಲಿ ಹೇಲು; ತಿರುಮಲ ಮನೆ ಕಟ್ಟಲು ಮಾಡಿದ ಸಾಲ, ಅವನ ಆಸ್ಪತ್ರೆಯ ಖರ್ಚಿನ ದೆಸೆಯಿಂದಾಗಿ ಒಂದು ದಮಡಿಯೂ ಹೊರಗೆ ಹುಟ್ಟುವ ಹಾಗಿಲ್ಲ. ಮನೆಯ ಮರ್ಯಾದೆಯ ಪ್ರಶ್ನೆ; ದೇವಕಿಗೆ ಸೂಕ್ಷ್ಮ ಹೊಳೆಯಬೇಕಿತ್ತು. ಇನ್ನೆಷ್ಟು ದಿನ ಇವರ ಹೊಟ್ಟೆ ಹೊರೆಯಬೇಕೊ? ಮಾಲತಿ ಅಲವತ್ತುಕೊಂಡಳು.

ಮಕ್ಕಳು ಮಲಗಿದ ಮೇಲೆ ತಣ್ಣಗಾಯಿತು. ಜಗಲಿಯ ಮಂಚ, ಕಂಬದ ಕೆಳಗೆ, ಗೋಡೆಗೆ ಚಾಚಿ ಕುಳಿತು ಹೆಂಗಸರ ಪುರಾಣ ಸುರುವಾಯಿತು.

"ಅತ್ಗೆ, ಮನೆಜಮೀನು ಮಾರೂದು ಬಿಡೂದು ನಿನ್ನ ಮರ್ಜಿ, ಒಪ್ಕತ್ತೆ. ಈ ಮನೇಲಿ ಹುಟ್ಟದ